ಓ ಎಸ್ ನಂಃ 325-14
ಪಿ ಡಬ್ಲ್ಯೂ ಃ 1

ದಿಃ 04-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 4 ಎ ರಿಂದ ಡಿ ರವರ ಪರ ಶ್ರೀ ಎಂ ಎಂ ವಕೀಲರಿಂದ**

34. ನನಗೆ ದಾವಾ ಸ್ವತ್ತುಗಳು ವಿಲ್ ಮೂಲಕ ದಿಃ02.07.1994 ರಲ್ಲಿ ಬಂದಿರುತ್ತದೆ. ದಿಃ31.07.1994 ರಂದು ನನ್ನ ಅತ್ತೆ ಮೃತಪಟ್ಟರು. ಆ ವಿಲ್ ಮೇಲೆ ನಾನು ಪ್ರೊಬೇಟ್ ಮಾಡಿಸಿಲ್ಲ ಅಂದರೆ ಸರಿ. ಸಂಜೀವೇಗೌಡರಿಗೆ ಒಬ್ಬ ಅಣ್ಣ ನರಸಪ್ಪ. ಅವರಿಗೆ ಇನ್ನೊಬ್ಬ ಅಣ್ಣ ಲಕ್ಷ್ಮಣ ಗೌಡ ಅಂದರೆ ಸರಿಯಲ್ಲ. ಲಕ್ಷ್ಮಣ ಗೌಡ ರವರ ಮಗನ ಹೆಸರು ನರಸೇಗೌಡ. ದಾವಾ ಸ್ವತ್ತುಗಳು ನನ್ನ ಗಂಡನಿಗೆ ತಾತನ ಆಸ್ತಿ ಅಂದರೆ ಸಾಕ್ಷಿ ನನ್ನ ಅತ್ತೆ ಈರಮ್ಮರವರಿಗೆ ಅವರ ತಂದೆಯಿಂದ ಬಂದಿರುವ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಸ್ವತ್ತು ನಾಗಣ್ಣರವರ ಕಡೆಯಿಂದ ಪಡಾ ರೆಸ್ಟೋರ್ ಮಾಡಿಕೊಂಡು ಆ ಸ್ವತ್ತು ನನ್ನ ಅತ್ತೆಗೆ ಬಂದಿರುತ್ತದೆ.

35. ದಾವಾ ಸ್ವತ್ತುಗಳು ಮೂಲತಃ ನರಸಿಂಹೇಗೌಡರದ್ದು ಅಂದರೆ ಸರಿಯಲ್ಲ. ಸದರಿ ವಿಲ್ ಅನ್ನು ಪ್ರಶ್ನಿಸಿ ಈರಮ್ಮರವರ ಉಳಿದ ಮಕ್ಕಳು ಒಂದು ದಾವೆ ಸಲ್ಲಿಸಿದ್ದಾರೆ ಅಂದರೆ ಸರಿ. ಆ ದಾವೆಯಲ್ಲಿ ನಾನು ವಕೀಲರನ್ನು ಇಟ್ಟು ಕೇಸು ನಡೆಸುತ್ತಿದ್ದೇನೆಂದರೆ ಸರಿ. ದಾವಾ ಸ್ವತ್ತು ಈರಮ್ಮನವರಿಗೆ ಅವರ ತಂದೆ ತಾತನಿಂದ ಬಂದ ಪಿತ್ರಾರ್ಜಿತ ಸ್ವತ್ತು. ವಿಲ್ ಅಲ್ಲಿ ದಾವಾ ಸ್ವತ್ತುಗಳು ಸ್ವಯಾರ್ಜಿತ ಎಂದು ನಮೂದು ಇದೆ ಅಂದರೆ ಸಾಕ್ಷಿ ಅದು ಪಡಾ ರೆಸ್ಟೋರ್ ಆಗಿ ಅವರಿಗೆ ಬಂದಿರುವುದರಿಂದ ಅವರ ಸ್ವತ್ತು ಎಂದು ನುಡಿಯುತ್ತಾರೆ. ನನ್ನ ಮಾವ ಸಂಜೀವೇಗೌಡ ಹಾಗೂ ಅವರ ಅಣ್ಣ ಲಕ್ಷ್ಮಣ ಗೌಡ ರವರ ಮದ್ಯೆ ವಿಭಾಗ ಆಗಿತ್ತು ಅಂದರೆ ಸಾಕ್ಷಿ ಈ ಸ್ವತ್ತಿನ ವಿಭಾಗ ಆಗಿಲ್ಲ ಎಂದು ನುಡಿಯತ್ತಾರೆ. ಆ ವಿಭಾಗದಲ್ಲಿ 2 ಎಕರೆ 21 ಗುಂಟೆ ಲಕ್ಷ್ಮಣಗೌಡರವರಿಗೆ ಬಂತು ಅಂದರೆ ಸರಿಯಲ್ಲ. 2 ಎಕರೆ ಸಂಜೀವೇಗೌಡರವರಿಗೆ ಬಂತು ಅಂದರೆ ಸರಿಯಲ್ಲ. ಆ 2 ಎಕರೆ ಸ್ವತ್ತನ್ನು ಸಂಜೀವೇಗೌಡರು ಹಾಗೂ ಹೆಂಡತಿ ಮತ್ತು ಅವರ ಮಕ್ಕಳು ಶಿವಕುಮಾರ್ ಎಂಬುವವರಿಗೆ ಮಾರಾಟ ಮಾಡಿದರು ಅಂದರೆ ಸರಿಯಲ್ಲ.

36. ಸ ನಂ 131/4 ರಲ್ಲಿ 4 ಎಕರೆ 21 ಗುಂಟೆ ಇದ್ದು ಅದರಲ್ಲಿ 2 ಎಕರೆ ನನ್ನ ಅತ್ತೆ ಮಾರಾಟ ಮಾಡಿದ್ದಾರೆಂದರೆ ಸರಿ. ಉಳಿಕೆ 2 ಎಕರೆ 21 ಗುಂಟೆಯನ್ನು ಲಕ್ಷ್ಮಣಗೌಡರವರು ಉಳಿಸಿಕೊಂಡಿದ್ದಾರೆಂದರೆ ಅದು ಈರಮ್ಮನ ಆಸ್ತಿ ಎಂದು ನುಡಿಯುತ್ತಾರೆ. ಆ 2 ಎಕರೆ 21 ಗುಂಟೆ ಖಾತೆ ಪಹಣಿ ಲಕ್ಷ್ಮಣಗೌಡ ರವರ ಹೆಸರಿನಲ್ಲಿ ಇದೆ ಅಂದರೆ ಸಾಕ್ಷಿ ಅದು ಮೋಸದಿಂದ 2010 ರಲ್ಲಿ ಮಾಡಿಕೊಂಡಿರುವುದು ಎಂದು ನುಡಿಯುತ್ತಾರೆ. ಆ ಖಾತೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹಾಕಿರುತ್ತೇವೆ. ಸದರಿ ಸ್ವತ್ತನ್ನು ಲಕ್ಷ್ಮಣಗೌಡರವರ ಮಕ್ಕಳು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಅಂದರೆ ಆ 2010 ರ ಖಾತೆ

ಆಧಾರದಲ್ಲಿ ಮಾಡಿದ್ದಾರೆಂದು ನುಡಿಯುತ್ತಾರೆ.

37. ದಾವಾ ಸ್ವತ್ತು ಮೂಲತಃ ನರಸಿಂಹೇಗೌಡರವರ ಮಗ ಲಕ್ಷ್ಮಣಗೌಡರು ಕಾನೂನು ಬದ್ದವಾಗಿ 4ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಅದು ಈರಮ್ಮನ ಆಸ್ತಿ ಎಂದು ನುಡಿಯುತ್ತಾರೆ. ಈರಮ್ಮರವರಿಗೆ ಬಂದ ಆಸ್ತಿಯನ್ನು ಮೊದಲೇ ಮಾರಾಟ ಮಾಡಿ ಈ ದಾವೆಯನ್ನು ನನ್ನ ಮೂಲಕ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಲಕ್ಷ್ಮಣಗೌಡರವರ ಆಸ್ತಿಯನ್ನು ಲಪಟಾಯಿಸಲು ವಿಲ್ ಅನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿರುವುದು ಅಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿ 1 ರಿಂದ 3 ಮತ್ತು 6 ರಿಂದ 7 ರವರ ಪಾಟೀ ಸವಾಲು ಮುಂದೂಡಲಾಯಿತು.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**